<u>ದಿನಾಂಕ: 31 .07.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಜಿ ಸಿ ಎಂ ವಕೀಲರಿಂದಃ</u>**

ಸರ್ವೆ ನಂ.161/1 ರಲ್ಲಿ 15 ಎಕರೆ ಜಮೀನು ಬರುತ್ತದೆ ಎಂದು ತೋರಿಸಲು ಸರ್ವೆ ಮಾಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ನಮ್ಮ ತಾತ ಖರೀದಿ ಮಾಡಿದ್ದು ಆಗ ಸರ್ವೆ ಮಾಡಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚನ್ನಪ್ಪ ಬಿನ್ ಭೀಮೆಗೌಡ ಮತ್ತು ಅವರ ವಂಶಸ್ಥರು 1970 ರಲ್ಲಿ ಭಾಗ ಮಾಡಿಕೊಂಡ ವಿಚಾರ ಗೊತ್ತಾ ಎಂಬ ಪ್ರಶ್ನೆಗೆ ಸಾಕ್ಷಿ ಕೇಳಿ ಗೊತ್ತು ಎಂದು ನುಡಿಯುತ್ತಾರೆ. ನಿಮ್ಮ ತಾತ ಎಂದು ಹೇಳಲಾಗುವ ಸಿದ್ದವೀರಪ್ಪ ಮಾರಾಟ ಮಾಡುವ ಮೊದಲೇ ಚನ್ನಪ್ಪ ಬಿನ್ ಭೀಮೆಗೌಡ ಮತ್ತು ಅವರ ಸಹೋದರರು ಭಾಗ ಮಾಡಿಕೊಂಡಿದ್ದಾರೋ ಇಲ್ಲವೋ ಎಂಬ ಪ್ರಶ್ನೆಗೆ ಸಾಕ್ಷಿ ಮೊದಲೇ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಕಂಡೇನಹಳ್ಳಿ ಸರ್ವೆ ನಂ.161/1 ರಲ್ಲಿ 30.04.1973 ರಲ್ಲಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ 1967 ರಲ್ಲಿ ವಿಭಾಗ ಮಾಡಿಕೊಂಡಿದ್ದರು ಎಂದು ಗೊತ್ತಾಯಿತು ಎಂದು ನುಡಿಯುತ್ತಾರೆ. ವಾದಿಗಳು ನೊಂದಾಯಿತ ವಿಭಾಗ ಪತ್ರದ ದಾಖಲಾತಿಯನ್ನು ನ್ಯಾಯಾಲಕ್ಕೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ವಾದಿಗಳು ಸರ್ವೆ ನಂ.161/1 ರ ಸಂಪೂರ್ಣ ವಿಸ್ತೀರ್ಣವನ್ನು 1973 ರಲ್ಲಿಯೇ ಪಾಲು ವಿಭಾಗದ ಮೂಲಕ ಹಂಚಿಕೊಂಡಿದ್ದರು ಎಂದರೆ ಸರಿಯಲ್ಲ. ಆ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಈ ದಾವೆಗಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-16 ರಲ್ಲಿ 1973 ರಲ್ಲಿ ನೊಂದಾಯಿತವಾಗಿದೆ ಎಂದರೆ ಸಾಕ್ಷಿ ಅದರಲ್ಲಿ 1967 ಕ್ಕೆ ಭಾಗ ಮಾಡಿಕೊಂಡಿದ್ದಾರೆ ಎಂದು ಸಹ ಇದೆ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು